3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ , ತುಮಕೂರು

**Spl.C. No. 29/2021**

ಪ್ರಾಸಾ 14

ಚಾಸಾ 16

| | |
|---|---|
| ಹೆಸರು | ಚಂದ್ರಶೇಖರ್ ಎಸ್.ಪಿ. |
| ತಂದೆಯ ಹೆಸರು | ಲೇಟ್ ಬೋರಯ್ಯ |
| ವಯಸ್ಸು | 34 ವರ್ಷ |
| ಉದ್ಯೋಗ | ದ್ವಿತೀಯ ದರ್ಜೆ ಸಹಾಯಕರು, ತಾಲ್ಲೂಕು ಕಚೇರಿ. |
| ವಾಸಸ್ಥಳ | ತುಮಕೂರು |

ಸಾಕ್ಷಿಯನ್ನು ದಿನಾಂಕ 28.04.2026 ರಂದು ಕರೆಸಿ ಪ್ರಮಾಣೀಕರಿಸಲಾಯ್ತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

1) ನಾನು ಕಳೆದ ಒಂಭತ್ತು ವರ್ಷಗಳಿಂದ ತುಮಕೂರಿನ ತಾಲ್ಲೂಕು ಕಚೇರಿಯಲ್ಲಿ ದ್ವಿ.ದ.ಸಹಾಯಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2) ದಿನಾಂಕ 30.08.2020 ರಂದು ನಾನು ಮನೆಯಲ್ಲಿದ್ದಾಗ ತುಮಕೂರು ತಹಸೀಲ್ದಾರ್ ರವರು ನನಗೆ ಕರೆ ಮಾಡಿ ತುಮಕೂರು ವೃತ್ತ ನಿರೀಕ್ಷಕರ ಕಚೇರಿಗೆ ಹೋಗುವಂತೆ ಸೂಚಿಸಿರುತ್ತಾರೆ. ಚಾಸಾ.15 ರವರಿಗೂ ಸಹ ಸದರಿ ಕಚೇರಿಗೆ ಹೋಗುವಂತೆ ತಹಸೀಲ್ದಾರ್ ರವರು ತಿಳಿಸಿರುತ್ತಾರೆ. ಅದರಂತೆ ನಾನು ತುಮಕೂರು ವೃತ್ತ ನಿರೀಕ್ಷಕರ ಕಚೇರಿಗೆ ಮಧ್ಯಾಹ್ನ 2.15 ಗಂಟೆಗೆ ಹೋಗಿರುತ್ತೇನೆ. ಕಚೇರಿಯಲ್ಲಿ ವೃತ್ತ ನಿರೀಕ್ಷಕರು, ನಮ್ಮ ಸಿಬ್ಬಂದಿಯಾದ ಚಾಸಾ.15 ರವರು ಹಾಜರಿದ್ದರು. ಐದು ಜನ ಆರೋಪಿತರು ಪೊಲೀಸರ ವಶದಲ್ಲಿದ್ದರು. ನಾನು ಠಾಣೆಗೆ ಹೋದ ನಂತರ ವೃತ್ತ

ನಿರೀಕ್ಷಕರು ಆರೋಪಿತರನ್ನು ತೋರಿಸಿ, ಇವರು ರೇಪ್ ಅಂಡ್ ಮರ್ಡರ್ ಪ್ರಕರಣದಲ್ಲಿ ಆರೋಪಿಗಳು ಎಂದು ಹೇಳಿರುತ್ತಾರೆ. ಆರೋಪಿತರ ಹೆಸರುಗಳು ಮನೋಜ್, ಮಾರುತಿ, ಧನುಷ್, ಧನರಾಜ್ ನಾಯಕ್ ಮತ್ತು ರಾಜು ಎಂದು ಗೊತ್ತಾಗಿರುತ್ತದೆ. ಈಗ ನ್ಯಾಯಾಲಯದ ಮುಂದೆ ಇರುವ 1 ರಿಂದ 3 ಮತ್ತು 5 ನೇ ಆರೋಪಿತರನ್ನು ಗುರುತಿಸುತ್ತೇನೆ.

3) ಆರೋಪಿತರು ಪೊಲೀಸರಿಗೆ ಘಟನಾ ಸ್ಥಳ, ಸಂಚು ರೂಪಿಸಿದ ಸ್ಥಳ ಹಾಗೂ ಕೃತ್ಯಕ್ಕೆ ಬಳಸಿದ ವಸ್ತುಗಳನ್ನು ಹಾಜರುಪಡಿಸುತ್ತೇವೆಂದು ಸ್ವ ಇಚ್ಛಾ ಹೇಳಿಕೆಗಳನ್ನು ನೀಡಿದ್ದರು. ವೃತ್ತ ನಿರೀಕ್ಷಕರ ಕಚೇರಿಯಲ್ಲಿದ್ದ ಟೇಬಲ್ ಮೇಲೆ ಒಂದು ಕಾರ್ ಕೀ ಇದ್ದು ಅದನ್ನು ತೆಗೆದುಕೊಂಡು ವೃತ್ತ ನಿರೀಕ್ಷಕರು ಕಚೇರಿಯ ಆವರಣಕ್ಕೆ ಬಂದು ಆರೋಪಿತರು Swift Dzire ಬಿಳಿ ಬಣ್ಣದ ಮತ್ತು ಹಳದಿ ಬೋರ್ಡಿನ ಕಾರನ್ನು ತೋರಿಸಿ ಅದರ ಡಿಕ್ಕಿಯನ್ನು ತೆರೆಯಲು ಹೇಳಿರುತ್ತಾರೆ. ಡಿಕ್ಕಿಯನ್ನು ತೆರೆದಾಗ ಅದರಲ್ಲಿ ಎರಡು ರಾಡ್‌ಗಳು ಇದ್ದವು. ಬೇರೆಯವರ ಮೇಲೆ ಕೃತ್ಯ ಎಸಗಲು ಅವುಗಳನ್ನು ಇಟ್ಟುಕೊಂಡಿರುವುದಾಗಿ ಆರೋಪಿತರು ಹೇಳಿರುತ್ತಾರೆ. ರಾಡ್‌ಗಳನ್ನು ವಶಕ್ಕೆ ತೆಗೆದುಕೊಂಡಿರುತ್ತಾರೆ. ಸದರಿ ರಾಡ್‌ಗಳನ್ನು ನೋಡಿದರೆ ಗುರುತಿಸುತ್ತೇನೆ. ಈಗ ನ್ಯಾಯಾಲಯದ ಮುಂದೆ ಹಾಜರುಪಡಿಸಿರುವ ರಾಡ್‌ಗಳನ್ನು ಸಾಕ್ಷಿಯು ಗುರುತಿಸಿದ್ದು ಅವುಗಳನ್ನು ಈಗಾಗಲೇ ಮು.ಮಾ.10 ಮತ್ತು 11 ಎಂದು ಗುರುತಿಸಲಾಗಿದೆ. ಈಗ ನನಗೆ ತೋರಿಸಿದ ಕಾರಿನ ಕೀನ್ನು ಗುರುತಿಸುತ್ತೇನೆ. ಅದನುನ ಈಗಾಗಲೇ ಮು.ಮಾ.9 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ಮು.ಮಾ.9(ಎ) ಎಂದು ಗುರುತಿಸಲಾಯಿತು.

4) ನಂತರ ಆರೋಪಿ ಮನೋಜ್ ರವರು Oppo android mobile ನ್ನು ಹಾಜರುಪಡಿಸಿದ್ದು, ಅದರಲ್ಲಿ ಎರಡು Airtel sim ಗಳು ಇದ್ದವು. ಆರೋಪಿ ಮನೋಜ್ ರವರು ಒಂದು ನೋಕಿಯಾ ಕೀಪ್ಯಾಡ್ ಮೊಬೈಲನ್ನು ಹಾಜರುಪಡಿಸಿರುತ್ತಾರೆ. ಅದರಲ್ಲಿ ಐಡಿಯಾ ಸಿಮ್ ಇತ್ತು.

5) ನಂತರ ಆರೋಪಿ ಮಾರುತಿರವರು Jio phone ನ್ನು ಹಾಜರುಪಡಿಸಿದ್ದು, ಅದರಲ್ಲಿ Jio sim ಇತ್ತು. ಆರೋಪಿ ಧನುಷ್ ರವರು ಒಂದು Vivo android mobile phone ನ್ನು ಹಾಜರುಪಡಿಸಿರುತ್ತಾರೆ. ಅದರಲ್ಲಿ Airtel ಸಿಮ್ ಇತ್ತು.

6) ನಂತರ ಆರೋಪಿ ಧನರಾಜ್ ನಾಯಕ್ ರವರು ಕಾರ್ಬನ್ ಕಂಪನಿಯ ಕೀಪ್ಯಾಡ್ ಮತ್ತು ವಿವೋ ಕಂಪನಿಯ ಎರಡು ಮೊಬೈಲ್ ಗಳನ್ನು ಹಾಜರುಪಡಿಸಿದ್ದು ಅದರಲ್ಲಿ ಒಂದು ಅಂಜಲಿರವರದ್ದು ಹಾಗೂ ಇನ್ನೊಂದು ಆರೋಪಿ ಧನರಾಜ್ ರವರದ್ದು. ಅಲ್ಲಿ ಬೇರೆ ಯಾವುದೇ ಆರೋಪಿಯು ಬೇರೆ ಯಾವುದೇ ವಸ್ತುವನ್ನು ಹಾಜರುಪಡಿಸಿರುವುದಿಲ್ಲ. ಸದರಿ ಆರೋಪಿತರು ಹಾಜರುಪಡಿಸಿದ ಮೊಬೈಲ್ ಫೋನುಗಳನ್ನು ವಶಕ್ಕೆ ತೆಗೆದುಕೊಂಡು ಸೀಲು ಮಾಡಿಕೊಂಡಿರುತ್ತಾರೆ. ನಂತರ ಪಂಚನಾಮೆಯನ್ನು ಮಾಡಿಕೊಂಡಿರುತ್ತಾರೆ. ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿ.21 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಗಳನ್ನು ನಿಪಿ.21(ಸಿ) ಮತ್ತು (ಡಿ) ಎಂದು ಗುರುತಿಸಲಾಯಿತು. ಸದರಿ ಮೊಬೈಲ್ ಗಳನ್ನು ನೋಡಿದರೆ ಗುರುತಿಸುತ್ತೇನೆ. ಈಗ ನ್ಯಾಯಾಲಯದ ಮುಂದೆ ಹಾಜರುಪಡಿಸಿರುವ ಮು.ಮಾ.12, 13, 14, 15, 16, 17 ಮತ್ತು 18 ನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಮು.ಮಾ.12 ರಿಂದ 18 ರ ಮೇಲೆ ಇರುವ ತನ್ನ ಸಹಿಗಳನ್ನು ಗುರುತಿಸಿದ್ದು ಅವುಗಳನುನ ಕ್ರಮವಾಗಿ ಮು.ಮಾ.12(ಎ), ಮು.ಮಾ.13(ಎ), ಮು.ಮಾ.14(ಎ), ಮು.ಮಾ.15(ಎ), ಮು.ಮಾ.16(ಎ), ಮು.ಮಾ.17(ಎ), ಮು.ಮಾ.18(ಎ) ಎಂದು ಗುರುತಿಸಲಾಯಿತು.

7) ಈಗ ನನಗೆ ತೋರಿಸಿದ ಭಾವಚಿತ್ರಗಳಲ್ಲಿ ಕಾಣುವ ಕಾರನ್ನು ಗುರುತಿಸುತ್ತೇನೆ, ಅವುಗಳನ್ನು ಈಗಾಗಲೇ ನಿಪಿ.24 ರಿಂದ 27 ಎಂದು ಗುರುತಿಸಲಾಗಿದೆ.

8) ನಂತರ ಆರೋಪಿತರು ತುಮಕೂರಿನ ಡಿ.ಎಂ.ಪಾಳ್ಯಕ್ಕೆ ಹೋಗುವ ರಸ್ತೆಯ ತಿರುವಿನಲ್ಲಿರುವ ಒಂದು ಜಾಗಕ್ಕೆ ಕರೆದುಕೊಂಡು ಹೋಗಿ ಕೃತ್ಯಕ್ಕೆ ಬಳಸಿದ ಸಿಮ್

ಗಳನ್ನು ಇದೇ ಜಾಗದಲ್ಲಿ ಆರೋಪಿ ಧನರಾಜ್ ರವರು ಚರಂಡಿಗೆ ಎಸೆದಿರುವುದಾಗಿ ಹೇಳಿರುತ್ತಾರೆ. ಆ ಜಾಗದಲ್ಲಿ ಪೊಲೀಸರು ಸಿಮ್ ಗಳಿಗಾಗಿ ತಪಾಸಣೆ ನಡೆಸಿದ್ದು ಯಾವುದೇ ಸಿಮ್ ಗಳು ಸಿಕ್ಕಿರುವುದಿಲ್ಲ. ನಂತರ ಸ್ಥಳದಲ್ಲಿ ಪಂಚನಾಮೆಯನ್ನು ಮಾಡಿಕೊಂಡಿರುತ್ತಾರೆ. ಈಗ ನನಗೆ ತೋರಿಸಿದ ನಿಪಿ.22 ರಲ್ಲಿ ನನ್ನ ಸಹಿ ಇರುತ್ತದೆ. ಅದನ್ನು ನಿಪಿ.22(ಬಿ) ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಯನ್ನು ಸಂಜೆ 4.30 ರಿಂದ 5.15 ಗಂಟೆವರೆಗೆ ಮಾಡಿಕೊಂಡಿರುತ್ತಾರೆ.

9) ಅಲ್ಲಿಂದ ಆರೋಪಿತರು ಕೃತ್ಯಕ್ಕೆ ಸಂಚು ರೂಪಿಸಿದ ಸ್ಥಳವನ್ನು ತೋರಿಸುವುದಾಗಿ ಯಲ್ಲಾಪುರದಲ್ಲಿರುವ ಬೋವಿಪಾಳ್ಯಕ್ಕೆ ಕರೆದುಕೊಂಡು ಹೋಗಿ ಸತೀಶ್ ರವರಿಗೆ ಸಂಬಂಧಪಟ್ಟ ಖಾಲಿ ಜಾಗದಲ್ಲಿ ನಿಂತುಕೊಂಡು ಚೌಡೇಶ್ವರಿ ದೇವಸ್ಥಾನದ ಹಿಂಭಾಗದಲ್ಲಿ ಇಲ್ಲಿಯೇ ನಾವು ಸಂಚು ರೂಪಿಸಿದ ಸ್ಥಳ ಎಂದು ತೋರಿಸಿರುತ್ತಾರೆ. ಆ ಜಾಗದಲ್ಲಿ ಪಂಚನಾಮೆಯನ್ನು ಮಾಡಿಕೊಂಡಿರುತ್ತಾರೆ. ಸದರಿ ಪಂಚನಾಮೆಯನ್ನು ಸಂಜೆ 5.30 ರಿಂದ 6.15 ಗಂಟೆವರೆಗೆ ಮಾಡಿಕೊಂಡಿರುತ್ತಾರೆ. ಈಗ ನನಗೆ ತೋರಿಸಿದ ನಿಪಿ.23 ರಲ್ಲಿ ನನ್ನ ಸಹಿ ಇರುತ್ತದೆ. ಅದನ್ನು ನಿಪಿ.23(ಬಿ) ಎಂದು ಗುರುತಿಸಲಾಯಿತು. ಎಲ್ಲಾ ಪಂಚನಾಮೆಗಳಿಗೆ ಆರೋಪಿತರು, ವೃತ್ತ ನಿರೀಕ್ಷಕರು, ಚಾಸಾ.15 ರವರು ಸಹಿಗಳನ್ನು ಮಾಡಿರುತ್ತಾರೆ. ಪಂಚನಾಮೆ ಕಾಲದಲ್ಲಿ ಭಾವಚಿತ್ರಗಳನ್ನು ತೆಗೆದುಕೊಂಡಿರುತ್ತಾರೆ. ಸದರಿ ಭಾವಚಿತ್ರಗಳನ್ನು ಈಗಾಗಲೇ ನಿಪಿ.28 ರಿಂದ 36 ಎಂದು ಗುರುತಿಸಲಾಗಿದೆ.

(ಈ ಹಂತದಲ್ಲಿ ಈ ಸಾಕ್ಷಿಯು ಈ ಹಿಂದೆ ತನಿಖಾಧಿಕಾರಿಯವರ ಮುಂದೆ ಮಾಡಿರುವ ನಿಪಿ.21 ಕ್ಕೆ ಸಂಬಂಧಿಸಿದಂತೆ ಭಾಗಶಃ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದರಿಂದ ಪ್ರತಿಕೂಲ ಪಕ್ಷಕಾರರು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅನುಮತಿ ನೀಡಬೇಕೆಂದು ಸರ್ಕಾರಿ ಅಭಿಯೋಜಕರು ಭಿನ್ನವಿಸಿರುತ್ತಾರೆ. ಈ ಪ್ರಕರಣದ ಕಾಗದ ಪತ್ರಗಳನ್ನು ಪರಿಶೀಲಿಸಿದಾಗ ಈ ಸಾಕ್ಷಿಯು ತನ್ನ ಹಿಂದಿನ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ ಪ್ರತಿಕೂಲ ಪಕ್ಷಕಾರನು ತನ್ನ ಪಾಟೀಸವಾಲಿನಲ್ಲಿ ಕೇಳಬಹುದಾದ

ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅಭಿಯೋಜನೆಗೆ ಅನುಮತಿ ನೀಡುವುದು ಸೂಕ್ತ ಮತ್ತು ನ್ಯಾಯೋಚಿತ ಎಂದು ಮನಗಂಡು ಅನುಮತಿ ನೀಡಲಾಯಿತು)

**ಪಾಟೀಸವಾಲು: ಸರ್ಕಾರಿ ಅಭಿಯೋಜಕರವರಿಂದಃ**

10) 1 ನೇ ಆರೋಪಿಯು ರೂ.550 ನ್ನು ಸಹ ನಿಪಿ.21 ರ ಪಂಚನಾಮೆ ಕಾಲದಲ್ಲಿ ಹಾಜರುಪಡಿಸಿದ್ದು ಅದನ್ನು ಪೊಲೀಸರು ವಶಕ್ಕೆ ತೆಗೆದುಕೊಂಡಿರುತ್ತಾರೆ ಎಂದರೆ ಸರಿ. ಸದರಿ ನಗದು ಹಣವನ್ನು ಈಗಾಗಲೇ ಮು.ಮಾ.19 ಎಂದು ಗುರುತಿಸಲಾಗಿದೆ. ಆರೋಪಿ ಧನರಾಜ್ ನಾಯಕ್ ರವರು ಒಟ್ಟು 3 ಮೊಬೈಲ್ ಗಳನ್ನು ಹಾಜರುಪಡಿಸಿದ್ದು, ಅದರಲ್ಲಿ ಎರಡು ಆರೋಪಿ ಧನರಾಜ್ ನಾಯಕ್ ರವರಿಗೆ ಸಂಬಂಧಿಸಿದ್ದು, ಅದರಲ್ಲಿ ಒಂದು ವಿವೋ ಕಂಪನಿಯ ಮೊಬೈಲ್ ಎಂದರೆ ಸರಿ. ಅದು ಮು.ಮಾ.16 ಎಂದರೆ ಸರಿ.

**ಪಾಟೀಸವಾಲುಃ 1, 2 ಮತ್ತು 5 ನೇ ಆರೋಪಿತರ ಪರ ಶ್ರೀ.B.K.P.S. ವಕೀಲರಿಂದ :**

11) ನಾನು ಸರ್ಕಾರಿ ನೌಕರನಾಗಿ ಪಂಚನಾಮೆ ಪ್ರಕ್ರಿಯೆಗಳಿಗೆ ಸಹಕರಿಸಿರುತ್ತೇನೆ. ಸರ್ಕಾರಿ ಕರ್ತವ್ಯಗಳನ್ನು ಹೊರತುಪಡಿಸಿ ಅನ್ಯ ಕರ್ತವ್ಯಗಳಿಗೆ ನಿಯೋಜನೆ ಮಾಡಿದಾಗ ಮೇಲಧಿಕಾರಿಗಳ ಲಿಖಿತ ಆದೇಶ ಇರಬೇಕು ಎಂದರೆ ಸರಿ. ಆ ರೀತಿ ಆದೇಶ ಮಾಡಿದ್ದಲ್ಲಿ ಅದರಲ್ಲಿ ಯಾವ ಸಮಯಕ್ಕೆ ನಮ್ಮನ್ನು ಬಿಡುಗಡೆ ಮಾಡಿರುತ್ತಾರೆ ಮತ್ತು ಯಾವ ಸಮಯಕ್ಕೆ ಕರ್ತವ್ಯಕ್ಕೆ ಹಾಜರಾಗಬೇಕೆಂದು ನಮೂದಿಸಲಾಗಿರುತ್ತದೆ ಎಂದರೆ ಸರಿ. ಯಾವ ಅಧಿಕಾರಿಯ ಮುಂದೆ ವರದಿ ಮಾಡಿಕೊಳ್ಳಬೇಕೆಂದು ಆದೇಶದಲ್ಲಿರುತ್ತದೆ ಎಂದರೆ ಸರಿ. ಆ ರೀತಿ ಆದೇಶ ಮಾಡಿದ ನಂತರ ನಮ್ಮ ದಿನಚರಿಯಲ್ಲಿ ನಮೂದಿಸಿ ನಾವು ಮುಂದುವರೆಯುತ್ತೇವೆ ಎಂದರೆ ಸರಿ.

12) ದಿಃ30.08.2020 ರಂದು ವೃತ್ತ ನಿರೀಕ್ಷಕರು ಲಿಖಿತವಾಗಿ ಪತ್ರ ವ್ಯವಹಾರವನ್ನು ಮಾಡಿರುತ್ತಾರೆ. ಅಂದು ಮಧ್ಯಾಹ್ನ 1.30 ಗಂಟೆಗೆ ತಹಸೀಲ್ದಾರ ರವರಿಗೆ ವೃತ್ತ

ನಿರೀಕ್ಷಕರು ಪತ್ರವನ್ನು ಕಳುಹಿಸಿರುತ್ತಾರೆ. ಆಗ ತಹಸೀಲ್ದಾರ್ ರವರು ಎಲ್ಲಿ ಇದ್ದರು ಎಂದು ನನಗೆ ಗೊತ್ತಿಲ್ಲ. ತಹಸೀಲ್ದಾರ ರವರಿಗೆ ನೀಡಿರುವ ಪತ್ರವನ್ನು ನಾನು ನೋಡಿರುವುದಿಲ್ಲ. ಮಹಜರನ್ನು ನಾನು ಓದಿರುತ್ತೇನೆ. ಪಂಚನಾಮೆಯಲ್ಲಿ ತಹಸೀಲ್ದಾರರವರ ನೇಮಕದಂತೆ ಎಂದು ಬರೆದಿರುತ್ತದೆ ಎಂದರೆ ಸರಿ. ಪಂಚನಾಮೆಯಲ್ಲಿ ತಹಸೀಲ್ದಾರರವರ ಮೌಖಿಕ ಆದೇಶ ಎಂದು ಬರೆದಿರುವುದಿಲ್ಲ. ಮಧ್ಯಾಹ್ನ 1.30 ರಿಂದ 2 ಗಂಟೆ ಸಮಯದಲ್ಲಿ ತಹಸೀಲ್ದಾರ್ ರವರು ಮೌಖಿಕವಾಗಿ ನನಗೆ ತಿಳಿಸಿರುತ್ತಾರೆ. ಅವರ ನಂಬರ್ ನನಗೆ ನೆನಪಿಲ್ಲ. ವೃತ್ತ ನಿರೀಕ್ಷಕರಿಗೆ ತಹಸೀಲ್ದಾರ ರವರ ಯಾವ ಮೊಬೈಲ್ ನಂಬರ್ ನಿಂದ ನನಗೆ ಕರೆ ಬಂದಿರುತ್ತದೆ ಎಂದು ತಿಳಿಸಿರುತ್ತೇನೆ. ಪೊಲೀಸ್ ನೋಟೀಸಿನಲ್ಲಿ ತಹಸೀಲ್ದಾರರವರ ಮೌಖಿಕ ಆದೇಶದ ಮೇರೆಗೆ ಎಂದು ನಾನು ನಮೂದಿಸಿರುವುದಿಲ್ಲ.

13) ಆರೋಪಿತರನ್ನುನಮಗೆ ಪರಿಚಯಿಸಿದಾಗ ಅವರು ಯಾವ ಬಣ್ಣದ ಬಟ್ಟೆಗಳನ್ನು ಧರಿಸಿದ್ದರು ಎಂದು ನೆನಪಿಲ್ಲ. ನಮ್ಮ ಸಮಕ್ಷಮದಲ್ಲಿ ಆರೋಪಿ ಧನರಾಜ್ ನಾಯಕ್ ರವರು ಕಾರಿನ ಕೀ ನ್ನು ಹಾಜರುಪಡಿಸಿರುವುದಿಲ್ಲ. ಆದ್ದರಿಂದ ಕಾರಿನ ಕೀ ನ್ನು ಯಾವ ಆರೋಪಿ ಹಾಜರುಪಡಿಸಿರುತ್ತಾನೆಂದು ನಿಖರವಾಗಿ ನನಗೆ ಹೇಳಲು ಆಗುವುದಿಲ್ಲ ಎಂದರೆ ಸರಿ. ಈಗ ನ್ಯಾಯಾಲಯದ ಮುಂದೆ ಆರೋಪಿ ಧನರಾಜ್ ನಾಯಕ್ ರವರು ಇರುವುದಿಲ್ಲ. ಆತನ ತಂದೆಯ ಹೆಸರು ನೆನಪಿಲ್ಲ. ಕಾರಿನ ಮಾಲೀಕರು ಯಾರೆಂದು ವಿಚಾರ ಮಾಡಿರುವುದಿಲ್ಲ. ಕಾರಿನಲ್ಲಿದ್ದ ರಾಡುಗಳು ಯಾರಿಗೆ ಸೇರಿರುತ್ತವೆ ಮತ್ತು ಎಲ್ಲಿಂದ ತಂದಿರುತ್ತಾರೆಂದು ವಿಚಾರ ಮಾಡಿರುವುದಿಲ್ಲ.

14) ಆರೋಪಿತರು ದರೋಡೆ ಮಾಡಲು ಉಪಯೋಗಿಸಿದ ಕಾರಿನ ಡಿಕ್ಕಿಯಲ್ಲಿ ಇಟ್ಟಿರುವುದಾಗಿ ಆರೋಪಿತರು ತಿಳಿಸಿರುವುದಾಗಿ ಪಂಚನಾಮೆಯಲ್ಲಿ ಬರೆದಿದ್ದು ಆ ಬಗ್ಗೆ ಪ್ರಕರಣಗಳು ಏನಾದರೂ ದಾಖಲಾಗಿರುವ ಬಗ್ಗೆ ವೃತ್ತ ನಿರೀಕ್ಷಕರು ನಮಗೆ ತಿಳಿಸಿರುವುದಿಲ್ಲ. ಆರೋಪಿತರು ನಮ್ಮ ಸಮಕ್ಷಮದಲ್ಲಿ ಹೇಳಿಕೆಗಳನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಅವರ ಹೇಳಿಕೆಗಳನ್ನು ಯಾವ ಸಮಯದಿಂದ ಯಾವ

ಸಮಯದವರೆಗೆ ದಾಖಲು ಮಾಡಿಕೊಂಡಿರುತ್ತಾರೆಂದು ನನಗೆ ಹೇಳಲು ಆಗುವುದಿಲ್ಲ. ಕಾರನ್ನು ಪೋಲೀಸ್ ಠಾಣೆಯ ಹತ್ತಿರ ಯಾರು ತಂದಿರುತ್ತಾರೆಂದು ನನಗೆ ಗೊತ್ತಿಲ್ಲ. Oppo android ಮಾಬೈಲ್ 1 ನೇ ಆರೋಪಿಯದ್ದು. ಸದರಿ ಮೊಬೈಲನ್ನು ಯಾವಾಗ ಮತ್ತು ಎಲ್ಲಿ ಖರೀದಿಸಿರುತ್ತಾರೆಂದು 1 ನೇ ಆರೋಪಿಯನ್ನು ಪೊಲೀಸರು ವಿಚಾರಣೆ ಮಾಡಿರುವುದಿಲ್ಲ. ಪೊಲೀಸರು ಸದರಿ ಮೊಬೈಲ್ ಗೆ ಸಂಬಂಧಪಟ್ಟ ಬಿಲ್ಲನ್ನು ಪರಿಶೀಲನೆ ಮಾಡಿರುವುದಿಲ್ಲ. ಮೊಬೈಲ್ ನಲ್ಲಿದ್ದ ಸಿಮ್ ನ ನಂಬರ್ ನನಗೆ ಗೊತ್ತಿಲ್ಲ. ಎರಡು ಏರ್ ಟೆಲ್ ಸಿಮ್ ಗಳು ಇದ್ದವು. ಆ ನಂಬರ್ ಗಳು ಯಾರ ಹೆಸರಿನಲ್ಲಿತ್ತು ಎಂದು ಗೊತ್ತಿಲ್ಲ. ಆ ಬಗ್ಗೆ ಪೊಲೀಸರು ವಿಚಾರ ಮಾಡಿರುವುದಿಲ್ಲ. Oppo android ಮಾಬೈಲ್ ಗಳು ಸಾಕಷ್ಟು ಇರುತ್ತವೆ ಎಂದರೆ ಸರಿ. ಬಿಲ್ ಇಲ್ಲದೇ ಮೊಬೈಲ್ ಯಾವ ವ್ಯಕ್ತಿಗೆ ಸಂಬಂಧಪಟ್ಟಿದ್ದು ಎಂದು ನಿಖರವಾಗಿ ಹೇಳಲು ಆಗುವುದಿಲ್ಲ ಎಂದರೆ ಸರಿ. ಅದರ IMEI ನಂಬರ್ ನನಗೆ ಗೊತ್ತಿಲ್ಲ.

15) ಕೀ ಪ್ಯಾಡ್ ಮೊಬೈಲನ್ನು ಎಲ್ಲಿ ಮತ್ತು ಯಾವಾಗ ಖರೀದಿಸಿರುತ್ತಾರೆಂದು ವಿಚಾರ ಮಾಡಿರುವುದಿಲ್ಲ. ಅದರಲ್ಲಿದ್ದ ಐಡಿಯಾ ಸಿಮ್ ನಂಬರ್ ನನಗೆ ಗೊತ್ತಿಲ್ಲ. ಜಿಯೋ ಫೋನ್ ಆರೋಪಿ ಮಾರುತಿರವರದ್ದು. ಆ ಬಗ್ಗೆ ದಾಖಲಾತಿ ಇರುವುದಿಲ್ಲ. ಅದರಲ್ಲಿ ಇದ್ದ ಸಿಮ್ ನ ನಂಬರ್ ಮತ್ತು ಅದು ಯಾರಿಗೆ ಸಂಬಂಧಿಸಿದ್ದು ಎಂದು ಗೊತ್ತಿಲ್ಲ. ಮು.ಮಾ.12 ರಿಂದ 18 ಯಾರ್ಯಾರಿಗೆ ಸೇರಿರುತ್ತದೆ ಎಂದು ತೋರಿಸಲು ಪೊಲೀಸರು ದಾಖಲಾತಿಗಳನ್ನು ಪರಿಶೀಲನೆ ಮಾಡಿರುವುದಿಲ್ಲ ಮತ್ತು ಅವುಗಳಲ್ಲಿದ್ದ ಸಿಮ್ ಗಳ ಬಗ್ಗೆಯೂ ಸಹ ದಾಖಲಾತಿಗಳನ್ನು ಪರಿಶೀಲನೆ ಮಾಡಿರುವುದಿಲ್ಲ. ಮು.ಮಾ.12 ರಿಂದ 18 ಕ್ಕೂ ಮತ್ತು ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಮು.ಮಾ.10 ಮತ್ತು 11 ಕಾರಿನ ಡಿಕ್ಕಿಯಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಮು.ಮಾ.10 ಮತ್ತು 11 ರ ಮೇಲೆ ನನ್ನ ಸಹಿ ಇರುವುದಿಲ್ಲ ಎಂದರೆ ಸರಿ. ಪಂಚನಾಮೆಗಳನ್ನು ಪೊಲೀಸರು ಟೈಪ್ ಮಾಡಿದ್ದು ಅವರ ಹೆಸರು ಗೊತ್ತಿಲ್ಲ. ಪಂಚನಾಮಯಲ್ಲಿ ಯಾರ ಉಕ್ತಲೇಖನದಿಂದ ಟೈಪ್ ಮಾಡಲಾಗಿದೆ ಎಂದು

ಬರೆದಿರುವುದಿಲ್ಲ. ಡಿ.ಎಂ.ಪಾಳ್ಯ ಗೆ ಹೋಗಲು ಸಂಜೆ 4 ರಿಂದ 4.15 ಗಂಟೆಗೆ ಪೋಲೀಸ್ ಠಾಣೆಯಿಂದ ಹೊರಟಿರುತ್ತೇವೆ. ಆರೋಪಿತರು, ನಾವು ಮತ್ತು ಪೊಲೀಸರು ಒಟ್ಟು 10 ಜನರು ಹೋಗಿರುತ್ತೇವೆ. ನಾವುಗಳು ಎರಡು ಪೊಲೀಸ್ ವಾಹನಗಳಲ್ಲಿ ಹೋಗಿರುತ್ತೇವೆ. ಡಿ.ಎಂ.ಪಾಳ್ಯದಲ್ಲಿ ಪಂಚನಾಮಗಳನ್ನು ಮಾಡಿಕೊಂಡಿರುವ ಅಕ್ಕಪಕ್ಕದಲ್ಲಿ ಮನೆಗಳು ಇರುತ್ತವೆ ಎಂದರೆ ಸಾಕ್ಷಿಯು ಉತ್ತರಕ್ಕೆ ಚಿಕನ್ ಅಂಗಡಿ , ದಕ್ಷಿಣಕ್ಕೆ ರೈಸ್ ಮಿಲ್ ಇರುತ್ತದೆ ಎಂದು ನುಡಿಯುತ್ತಾರೆ. ರೈಸ್ ಮಿಲ್ ನಲ್ಲಿ ಸಾಕಷ್ಟು ಜನರು ಕೆಲಸ ಮಾಡುತ್ತಾರೆ ಎಂದರೆ ಸಾಕ್ಷಿಯು ನಾನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. ಚಿಕನ್ ಅಂಗಡಿ ತೆರೆದಿತ್ತೋ, ಇಲ್ಲವೋ ನನಗೆ ನೆನಪಿಲ್ಲ. ಡಿ.ಎಂ.ಪಾಳ್ಯದಲ್ಲಿ ಇರುವ ರಸ್ತೆಯಲ್ಲಿ ಸಾಕಷ್ಟು ಜನರು ಓಡಾಡುತ್ತಾರೆ ಎಂದರೆ ಸರಿ. ಆ ಜಾಗದಲ್ಲಿ ಸುಮಾರು ಮುಕ್ಕಾಲು ಗಂಟೆ ಕಾಲ ಇದ್ದೆವು. ಆಗ ಸ್ಥಳಕ್ಕೆ ಸ್ಥಳೀಯರು ಯಾರೂ ಬಂದಿರುವುದಿಲ್ಲ. ಪೊಲೀಸರು ಸ್ಥಳೀಯರನ್ನು ಕರೆದಿರುವುದಿಲ್ಲ. ಪಂಚನಾಮೆಯನ್ನು ಸ್ಥಳದಲ್ಲಿಯೇ ಟೈಪ್ ಮಾಡಿರುತ್ತಾರೆ. ಅವರ ಹೆಸರು ಗೊತ್ತಿಲ್ಲ. ಪ್ರಿಂಟನ್ನು ಜೀಪ್ ನಲ್ಲಿ ತೆಗೆದಿರುತ್ತಾರೆ. ಆ ಬಗ್ಗೆ ಪಂಚನಾಮೆಯಲ್ಲಿ ನಮೂದಿಸಿರುವುದಿಲ್ಲ. ಬ್ಯಾಟರಿಯನ್ನು ಬಳಸಿ ಪ್ರಿಂಟನ್ನು ತೆಗೆಯಲಾಗಿದೆ ಎಂದು ಪಂಚನಾಮೆಯಲ್ಲಿ ನಮೂದಿಸಿಲ್ಲ. 5 ಜನ ಆರೋಪಿತರ ಸಹಿಗಳು ಇರುವುದಿಲ್ಲ. 3 ಜನ ಪೊಲೀಸರ ಸಹಿಗಳನ್ನು ತೆಗೆದುಕೊಂಡಿರುವುದಿಲ್ಲ ಮತ್ತು ಅವರ ಹೆಸರುಗಳನ್ನು ನಮೂದಿಸಿರುವುದಿಲ್ಲ. ನಿಪಿ.22 ನ್ನು ಪೋಲೀಸ್ ಠಾಣೆಯಲ್ಲಿ ತಯಾರುಮಾಡಿಕೊಂಡು ವೃತ್ತ ನಿರೀಕ್ಷಕರ ಮಾತನ್ನು ಕೇಳಿಕೊಂಡು ನಾನು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ.

16) ಸಿಮ್ ನ್ನು ಪೋಲೀಸ್ ಸಿಬ್ಬಂದಿ ಹುಡುಕಿರುತ್ತಾರೆ. ಆಗ ವೀಡಿಯೋ ಮಾಡಿಕೊಂಡಿರುವುದಿಲ್ಲ. ಠಾಣೆಯಲ್ಲಿ ಸೃಷ್ಟ ಮಾಡಿಕೊಂಡ ಪಂಚನಾಮೆಗಳಿಗೆ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಎಲ್ಲರೂ ಎರಡು ವಾಹನಗಳಲ್ಲಿ ಬೋವಿ ಪಾಳ್ಯಕ್ಕೆ ಹೋಗಿರುತ್ತೇವೆ. ಬೋವಿ ಪಾಳ್ಯದಲ್ಲಿ ಸಾಕಷ್ಟು ಮನೆಗಳು ಇರುತ್ತವೆ ಎಂದರೆ ಆರೋಪಿತರು ತೋರಿಸಿದ ಜಾಗದಲ್ಲಿ ಮನೆಗಳು

ಇರಲಿಲ್ಲ ಎಂದು ನುಡಿಯುತ್ತಾರೆ. ಆ ಜಾಗವು ಸತೀಶ್ ರವರಿಗೆ ಸೇರಿರುತ್ತದೆ ಎಂದು ಪೊಲೀಸರು ದಾಖಲಾತಿಗಳನ್ನು ಪರಿಶೀಲನೆ ಮಾಡಿರುವುದಿಲ್ಲ. ಸ್ಥಳೀಯರು ಆ ಜಾಗ ಸತೀಶ್ ರವರಿಗೆ ಸೇರಿರುತ್ತದೆ ಎಂದು ತಿಳಿಸಿರುತ್ತಾರೆ. ಸ್ಥಳೀಯರನ್ನು ವೃತ್ತ ನಿರೀಕ್ಷಕರು ವಿಚಾರಣೆ ಮಾಡಿರುತ್ತಾರೆ. ಸ್ಥಳೀಯರ ಹೆಸರು ಮತ್ತು ವಿಳಾಸವನ್ನು ಕೇಳಿರುತ್ತಾರೆ, ಆದರೆ ನನಗೆ ನೆನಪಿಲ್ಲ. ಸ್ಥಳೀಯರನ್ನು ವಿಚಾರಣೆ ಮಾಡಿರುವ ಬಗ್ಗೆ ಪಂಚನಾಮೆಯಲ್ಲಿ ನಮೂದಿಸಿಲ್ಲ. ಸ್ಥಳೀಯರ ಸಹಿಗಳನ್ನು ಪಂಚನಾಮಗಳಿಗೆ ತೆಗೆದುಕೊಂಡಿರುವುದಿಲ್ಲ. ಪಂಚನಾಮೆಯನ್ನು ಪೊಲೀಸರು ಟೈಪ್ ಮಾಡಿರುತ್ತಾರೆ. ಅವರ ಹೆಸರು ನನಗೆ ಗೊತ್ತಿಲ್ಲ. ಅದನ್ನು ಪಂಚನಾಮೆಯಲ್ಲಿ ನಮೂದಿಸಿಲ್ಲ ಮತ್ತು ಅವರ ಸಹಿಗಳನ್ನು ತೆಗೆದುಕೊಂಡಿರುವುದಿಲ್ಲ. ವೃತ್ತ ನಿರೀಕ್ಷಕರೊಂದಿಗೆ ಬಂದಿದ್ದ ವಾಹನದ ಚಾಲಕರಲ್ಲಿ ಯಾರು ಪಂಚನಾಮೆಯನ್ನು ಟೈಪ್ ಮಾಡಿರುತ್ತಾರೆಂದು ನನಗೆ ನೆನಪಿಲ್ಲ. ನಾನು ಸ್ಥಳಕ್ಕೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಆ ಜಾಗಕ್ಕೆ ಬಂದು ಹೋಗಿರುವ ಬಗ್ಗೆ ಸ್ಥಳೀಯರು ಯಾರೂ ಹೇಳಿರುವುದಿಲ್ಲ. ನಿಪಿ.23 ನ್ನು ಠಾಣೆಯಲ್ಲಿ ತಯಾರುಮಾಡಿಕೊಂಡು ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ.

17) 4 ನೇ ಆರೋಪಿಯಿಂದ ಹಣವನ್ನು ನನ್ನ ಸಮಕ್ಷಮ ವಶಕ್ಕೆ ತೆಗೆದುಕೊಂಡಿರುತ್ತಾರೆ, ಆತನು ತನ್ನ ಬಲಭಾಗದ ಪ್ಯಾಂಟ್ ಜೇಬಿನಿಂದ ತೆಗೆದುಕೊಟ್ಟಿರುತ್ತಾನೆ. ಈ ಬಗ್ಗೆ ಪಂಚನಾಮೆಯಲ್ಲಿ ನಮೂದಿಸಿಲ್ಲ ಎಂದರೆ ಸರಿ. ಆತನಿಂದ ವಶಕ್ಕೆ ತೆಗೆದುಕೊಂಡ ಹಣದಲ್ಲಿ ಎಷ್ಟು ಮುಖಬೆಲೆಯ ನೋಟುಗಳು ಇದ್ದವು ಎಂದು ನೆನಪಿಲ್ಲ. ಮಹಜರ್ ನಲ್ಲಿ ಎಷ್ಟು ಮುಖಬೆಲೆಯ ನೋಟುಗಳು ಎಂದು ಬರೆದಿರುತ್ತದೆಯೇ ಎಂದರೆ ನನಗೆ ಗೊತ್ತಿಲ್ಲ. ನೋಟುಗಳ ನಂಬರ್ ಗಳನ್ನು ಬರೆದುಕೊಂಡಿರುವುದಿಲ್ಲ. ಆ ರೀತಿ ನಂಬರ್ ಗಳನ್ನು ಬರೆದುಕೊಂಡಿಲ್ಲವಾದ್ದರಿಂದ ಸ್ಪಷ್ಟವಾಗಿ ಹೇಳಲು ಆಗುವುದಿಲ್ಲ ಎಂದರೆ ಸರಿ. ಪಂಚನಾಮೆ ಪ್ರಕ್ರಿಯೆಗಳು ಮುಗಿದ ನಂತರ ನಾನು ತಹಸೀಲ್ದಾರ ರವರಿಗೆ ಯಾವುದೇ ವರದಿಯನ್ನು ನೀಡಿರುವುದಿಲ್ಲ. ನನಗೆ ತಹಸೀಲ್ದಾರ ರವರು ಯಾವುದೇ ಆದೇಶ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾವೇ

ಸ್ವತಃ ವೃತ್ತ ನಿರೀಕ್ಷಕರ ಕಚೇರಿಗೆ ಹೋಗಿ ಅವರು ಹೇಳಿದಂತೆ ದಾಖಲಾತಿಗಳಿಗೆ ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಪೊಲೀಸರ ವಶದಲ್ಲಿ ಆರೋಪಿಗಳನ್ನು ನೋಡಿರುವುದಿಲ್ಲ , ಅವರುಗಳನ್ನು ಇದೇ ಮೊದಲನೇ ಬಾರಿ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ.24 ರಿಂದ 36 ರವರೆಗಿನ ಭಾವಚಿತ್ರಗಳನ್ನು ಈಗಿನ ತಂತಜ್ಞಾನವನ್ನು ಉಪಯೋಗಿಸಿ ಠಾಣೆಯಲ್ಲಿ ಸೃಷ್ಟಿ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ.

**<u>ಪಾಟೀಸವಾಲುಃ 3 ನೇ ಆರೋಪಿ ಪರ ಶ್ರೀ.ಎಂ.ಸಿ.ಸಿ. ವಕೀಲರಿಂದ :</u>**

18) ವೃತ್ತ ನಿರೀಕ್ಷಕರು ಸ್ಥಳೀಯರನ್ನು ವಿಚಾರ ಮಾಡುವಾಗ ಅವರು ಕಾಣುವಂತೆ ಭಾವಚಿತ್ರಗಳನ್ನು ತೆಗೆದುಕೊಂಡಿರುತ್ತಾರೆ. ನಾವು ಹೋದ ಎರಡು ವಾಹನಗಳು ಯಾವ್ಯಾವ ಪೋಲೀಸ್ ಠಾಣೆಗೆ ಸಂಬಂಧಪಟ್ಟಿರುತ್ತವೆ ಎಂದು ಗೊತ್ತಿಲ್ಲ. ನಾನು ಪೋಲೀಸ್ ಠಾಣೆಗೆ ಹೋಗಿರುವುದಿಲ್ಲ , ನಮ್ಮ ಸಮಕ್ಷಮ ಯಾವುದೇ ಪಂಚನಾಮೆಯನ್ನು ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿತರ ವಿರುದ್ಧ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮುದ್ದೆ ಮಾಲುಗಳನ್ನು ಸೀಲು ಮಾಡಿಕೊಂಡಾಗ ಯಾವ ಅಕ್ಷರದಿಂದ ಸೀಲು ಮಾಡಿಕೊಂಡಿರುತ್ತಾರೆಂದು ಗೊತ್ತಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸಾ ಸ ಇ ಎ ಓ

3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ತುಮಕೂರು.

ಸಾಕ್ಷಿಯ ಸಹಿ